O.S .No.76/2020
ಪಿ.ಡಬ್ಲ್ಯೂ-1

ದಿನಾಂಕ: 13.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ.ಬಿ. ವಕೀಲರಿಂದಃ

ನಿಪಿ-4 ರಂತೆ ನೀವು ಪ್ರತಿವಾದಿಗಳಿಗೆ ನೋಟಿಸ್ ಕಳುಹಿಸಿರುತ್ತೀರಿ ಎಂದರೆ ಸರಿ. ದಿಃ 26.12.2019 ರಂದು ಪ್ರತಿವಾದಿಗಳು ನೀಡಿದ ಪ್ರತ್ಯುತ್ತರ ನೋಟಿಸ್ ನಿಮ್ಮ ಹೆಂಡತಿಗೆ ಜಾರಿಯಾಗಿದೆ ಎಂದರೆ ಸರಿ. ಸದರಿ ಪ್ರತ್ಯುತ್ತರ ನೋಟಿಸ್ ನಲ್ಲಿ ಬರೆದ ಅಂಶವನ್ನು ವಕೀಲರ ಮೂಲಕ ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ಪ್ರತಿವಾದಿಗಳು ಪ್ರತ್ಯುತ್ತರ ನೋಟಿಸ್ ಕೊಟ್ಟಿರುವ ವಿಚಾರವನ್ನು ತಿಳಿಸಿರುತ್ತೇನೆ. ನಿಮ್ಮ ವಾದ ಪತ್ರದಲ್ಲಿ ಪ್ರತಿವಾದಿಗಳು ಪ್ರತ್ಯುತ್ತರ ನೋಟಿಸ್ ಕೊಟ್ಟಿರುವ ವಿಚಾರವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ.

ನೀವು ಹೊಸಪುರದಲ್ಲಿ ವಾಸವಾಗಿದ್ದೀರಿ ಎಂದರೆ ಸರಿ. ನೀವು ಲೇವಾದೇವಿ ವ್ಯವಹಾರ ಮಾಡಲು ಪರವಾನಿಗೆ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ನ್ಯಾಯಾಲಯದಲ್ಲಿ ಹಣ ವಸೂಲಾತಿಗಾಗಿ ಎಷ್ಟು ದಾವೆಯನ್ನು ಹೂಡಿರುತ್ತೀರಿ ಎಂದರೆ ಸಾಕ್ಷಿ ಈ ದಾವೆ ಹೊರತುಪಡಿಸಿ ಬೇರೆ ಒಂದು ದಾವೆ ಇದೆ ಎಂದು ಹೇಳುತ್ತಾರೆ. ನೀವು 5 ಜನರ ಮೇಲೆ 5 ದಾವೆಗಳನ್ನು ಹಣ ವಸೂಲಾತಿಗಾಗಿ ಹೂಡಿರುತ್ತೀರಿ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ದಿಃ 03.05.2016 ರಂದು ನಿಮ್ಮನ್ನು 4,40,000/- ರೂ. ಗಳ ಸಾಲ ಕೊಡುವಂತೆ ಕೇಳಿರುತ್ತಾರೆಂದರೆ ಸರಿ. ದಿಃ 28.05.2016 ರಂದು ಎರಡು ಆನ್ ಡಿಮಾಂಡ್ ಪ್ರನೋಟಗಳನ್ನು 1 ನೇ ಪ್ರತಿವಾದಿಯಿಂದ ಬರೆಸಿಕೊಂಡು, ಒಂದು ಆನ್ ಡಿಮಾಂಡ್ ಪ್ರನೋಟನಂತೆ 2,40,000/- ರೂ. ಗಳನ್ನು ಹಾಗೂ ಮತ್ತೊಂದು ಆನ್ ಡಿಮಾಂಡ್ ಪ್ರನೋಟನಂತೆ 2 ಲಕ್ಷ ರೂ. ಗಳನ್ನು 1 ನೇ ಪ್ರತಿವಾದಿಗೆ ಕೊಟ್ಟಿರುತ್ತೀರಿ ಎಂದರೆ ಸರಿ. ಸಾಕ್ಷಿಗೆ ದಿಃ 28.05.2016 ರ 2 ಲಕ್ಷ ರೂ. ಹಾಗೂ 2,40,000/- ರೂ. ಗಳ ಎರಡು ಆನ್ ಡಿಮಾಂಡ್ ಪ್ರನೋಟಗಳನ್ನು ತೋರಿಸಿದ್ದು, ಅವುಗಳನ್ನೇ 1 ನೇ ಪ್ರತಿವಾದಿ ನಿಮಗೆ ಬರೆದುಕೊಟ್ಟಿದ್ದು, ಸಾಕ್ಷಿ ಹೌದು ಎಂದು ಒಪ್ಪಿಕೊಂಡ ಮೇರೆಗೆ, ಸದರಿ ದಾಖಲೆಗಳನ್ನು ನಿಡಿ-**1** ಮತ್ತು **2** ಎಂದು ಗುರುತಿಸಲಾಯಿತು. ನಿಡಿ-1 ಮತ್ತು 2 ಕ್ಕೆ

ತಿಮ್ಮನಾಯಕ ಮತ್ತು ಮಂಜುನಾಥ ರವರ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ತಿಮ್ಮನಾಯಕ ಒಬ್ಬರೇ ಸಹಿ ಮಾಡಿದ್ದು, ಮಂಜುನಾಥ ಸಹಿ ಮಾಡಿರಲಿಲ್ಲ ಎಂದು ಹೇಳುತ್ತಾರೆ. ನಿಡಿ-1 ನ್ನು ಸಣ್ಣಮಾದಯ್ಯ ಹಾಗೂ ನಿಡಿ-2 ನ್ನು ಸಿ.ಎಸ್. ನಾಗರಾಜು ರವರು ಬರೆದಿದ್ದಾರೆ ಎಂದರೆ ಸರಿ. ನಿಡಿ-1 ಮತ್ತು 2 ರಂತೆ ದಿಃ 08.02.2019 ರಲ್ಲಿ 1 ನೇ ಪ್ರತಿವಾದಿ ಸಾಲ ಪಡೆದ 4,40,000/- ರೂ. ಗಳಿಗೆ ತಗಲುವ ಬಡ್ಡಿಯನ್ನು ಪಾವತಿಸಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವ್ಯವಹಾರ ಮುಗಿದುಹೋಗಿತ್ತು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಬಡ್ಡಿ ಪಾವತಿ ಮಾಡಿದ ನಂತರ ದಿಃ 08.02.2019 ರಂದು ಇನ್ನೊಂದು ಆನ್ ಡಿಮಾಂಡ್ ಪ್ರನೋಟ್ ನ್ನು ನಿಮಗೆ ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ದಿಃ 08.02.2019 ರ ಆನ್ ಡಿಮಾಂಡ್ ಪ್ರನೋಟ್ ನ್ನು ತೋರಿಸಿದ್ದು, ಸಾಕ್ಷಿ ಇಲ್ಲ ಎಂದು ಹೇಳಿರುತ್ತಾರೆ. ಸದರಿ ಆನ್ ಡಿಮಾಂಡ್ ಪ್ರನೋಟ್ ನ್ನು ಬಿ.ಸಿ.ಸುಂದ್ರೇಶ ವಕೀಲರು ಬರವಣಿಗೆ ಮಾಡಿರುತ್ತಾರೆಂದರೆ ಸರಿಯಲ್ಲ. ದಿಃ 08.02.2019 ರ ಆನ್ ಡಿಮಾಂಡ್ ಪ್ರನೋಟ್ ಗೂ ತಿಮ್ಮನಾಯಕ ಮತ್ತು ಮಂಜುನಾಥ ರವರೇ ಸಾಕ್ಷಿಗಳು ಎಂದರೆ ಸರಿಯಲ್ಲ. 2019 ಫೆಬ್ರುವರಿ ಕೊನೆಯ ವಾರದಂದು ಹಣದ ಭದ್ರತೆಗಾಗಿ ಆಧಾರ ಪತ್ರ ಬರೆದುಕೊಡುವಂತೆ 1 ನೇ ಪ್ರತಿವಾದಿಗೆ ಒತ್ತಡ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಆಧಾರ ಪತ್ರ ಬರೆದುಕೊಡುವಂತೆ ಕೇಳಿದಾಗ 2019 ರ ಮಾರ್ಚ್ ಮೊದಲನೇ ವಾರದಂದು 1 ನೇ ಪ್ರತಿವಾದಿ 4,40,000/- ರೂ. ಗಳ ಪೈಕಿ 1 ಲಕ್ಷ ರೂ. ಗಳನ್ನು ನಿಮಗೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉಳಿಕೆ 3,40,000/- ರೂ. ಗಳಿಗೆ ಆಧಾರ ಪತ್ರ ಬರೆದುಕೊಡುವಂತೆ ಒತ್ತಡ ಮಾಡಿ 1 ನೇ ಪ್ರತಿವಾದಿಯನ್ನ ಉಪನೊಂದಣಾ ಕಚೇರಿಯಲ್ಲಿ ಕರೆದುಕೊಂಡು ಹೋಗಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಆಧಾರ ಪತ್ರವನ್ನು ನಿಮ್ಮ ಹೆಂಡತಿ ಹೆಸರಿಗೆ ಬರೆಸಿ, ನೀವು ಸಾಕ್ಷಿ ಹಾಕಿರುತ್ತೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೂರು ಜನ ಸಹಿ ಮಾಡಿದ್ದೇವೆ ಎಂದು ಹೇಳುತ್ತಾರೆ. ದಿಃ 13.03.2019 ರಂದು 1 ನೇ ಪ್ರತಿವಾದಿ ನಿಮ್ಮ ಹೆಂಡತಿ ಹೆಸರಿಗೆ ಖುಷ್ಕಿ ಜಮೀನಿನ ಸಂಬಂಧ ಯಾವುದೇ ಒಪ್ಪಂದದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ದಿಃ 13.03.2019 ರಂದು ವಾದಿ 1 ನೇ ಪ್ರತಿವಾದಿಗೆ 2,95,000/- ರೂ. ಗಳನ್ನು ಕ್ರಯದ ಮೊಬಲಗಾಗಿ ಕೊಟ್ಟಿಲ್ಲ ಎಂದರೆ ಸಾಕ್ಷಿ ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. 2,95,000/- ರೂ, ಗಳನ್ನು ಯಾವ ಬ್ಯಾಂಕಿನಿಂದ ತಂದಿದ್ದೀರಿ ಎಂದರೆ ಸಾಕ್ಷಿ ಹೊಗೊಸೊಪ್ಪು ಮತ್ತು ವ್ಯವಸಾಯ

ಮಾಡಿದ್ದರಲ್ಲಿ ಕೂಡಿ ಇಟ್ಟಿದ್ದೆ  ಎಂದು ಹೇಳುತ್ತಾರೆ. ಕಾನೂನಿನ ಪ್ರಕಾರ 20 ಸಾವಿರ ಮೇಲ್ಪಟ್ಟು ವ್ಯವಹಾರವನ್ನು ಚೆಕ್ ಅಥವಾ ಡಿ.ಡಿ ಮುಖೇನ ಮಾಡಬೇಕೆಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ. ದಿಃ 13.03.2019 ರಲ್ಲಿ ನಿಮ್ಮ ಬಳಿ ಹಣ ಇದ್ದ ಬಗ್ಗೆ ಹಾಗೂ ಕೂಡಿಸಿಟ್ಟ ಬಗ್ಗೆ ನೀವೇನಾದರೂ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.